ಎಂದು ಒತ್ತಾಯಿಸುತ್ತಿದ್ದರು. ಸಿನಿಮಾಗೆ ಬಂದೆ. ಇಲ್ಲಿಯೂ 2009ರಲ್ಲಿ ನಾಗತಿಹಳ್ಳಿ ಚಂದ್ರಶೇಖರ್ ಅವರ 'ಒಲವೆ ಜೀವನ ಲೆಕ್ಕಾಚಾರ' ಸಿನಿಮಾದ ಮೂಲಕವೇ ನಟನೆ ಆರಂಭಿಸಿದೆ. ನಂತರ 'ಮುದ್ದು ಮನಸೇ', 'ಬೆಂಕಿಪಟ್ಣ' ಚಿತ್ರಗಳಲ್ಲಿ ನಟಿಸಿದೆ. ನಟನೆಗೆ ಹೆಚ್ಚು ಅವಕಾಶ ಸಿಕ್ಕಿದ್ದು ಸುಮನ್ ಕಿತ್ತೂರ್ ಅವರ 'ಕಿರಗೂರಿನ ಗಯ್ಯಾಳಿಗಳು' ಸಿನಿಮಾದಲ್ಲಿ. ನಂತರ 'ಪಟಾಕಿ', 'ಶ್ರೀಕಂಠ' ಸಿನಿಮಾಗಳಲ್ಲಿ ನಟಿಸಿದೆ. 'ಕೆಜಿಎಫ್'ನಲ್ಲಿ ಮಾಡಿದೆ. ಹೇಮಂತ್ ನಿರ್ದೇಶನದ 'ಕವಲುದಾರಿ' ನನಗೆ ಅವಕಾಶಗಳ ಹೆದ್ದಾರಿಯನ್ನೇ ತೆರೆದುಕೊಟ್ಟ ಸಿನಿಮಾ. ಈಗ ಪಿಆರ್‌ಕೆ ಪ್ರೊಡಕ್ಷನ್‌ನಲ್ಲಿ ತಯಾರಾಗುತ್ತಿರುವ ಪನ್ನಗಭರಣ ಅವರ ಸಿನಿಮಾದಲ್ಲಿ ನಟಿಸಿದ್ದೇನೆ. 'ಜೋರ್ಡನ್', 'ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ' ಹೀಗೆ ಹಲವು ಸಿನಿಮಾಗಳಲ್ಲಿ ನಟಿಸುತ್ತಿದ್ದೇನೆ.

**◆ ರಂಗಭೂಮಿಯಿಂದ ಸಿನಿಮಾರಂಗಕ್ಕೆ ಬಂದಾಗ ನೀವು ಎದುರಿಸಿದ ಸವಾಲುಗಳೇನು?**

ನಾಟಕದಲ್ಲಿ ಪ್ರೇಕ್ಷಕನೊಂದಿಗೆ ನಟ ನೇರ ಮುಖಾಮುಖಿಯಾಗುತ್ತಾನೆ. ಅಲ್ಲಿಯೇ ನಾವು ಹೇಗೆ ನಟಿಸುತ್ತಿದ್ದೇವೆ ಎನ್ನುವುದು ಗೊತ್ತಾಗಿಬಿಡುತ್ತದೆ. ಸಿನಿಮಾದಲ್ಲಿ ಟೆಕ್ನಾಲಜಿ ಇದೆ. ಕ್ಯಾಮೆರಾ ಇದೆ. ಯಾವುದನ್ನೂ ಅತಿರಂಜಿಸುವುದಕ್ಕಾಗುವುದಿಲ್ಲ. ನಾಟಕದಲ್ಲಿ ಹಾಗಿಲ್ಲ, ಮೈ ಮನಸ್ಸುಗಳನ್ನು ಬಿಚ್ಚಿ ನಟಿಸಿದರೇನೇ ಕಡೆಯಲ್ಲಿ ಕೂತ ಪ್ರೇಕ್ಷಕನಿಗೂ ನಮ್ಮ ಅಭಿನಯ ಕಾಣಿಸುವುದು.

ನಾನು ನಿರ್ದೇಶಕರ ನಟ. ನಿರ್ದೇಶಕರಿಂದ ಪಾತ್ರಕ್ಕೆ ಸಂಬಂಧಿಸಿದ ಒಳನೋಟಗಳನ್ನು ಬೆನ್ನಿಗೆಬಿದ್ದು ತೆಗೆದುಕೊಳ್ತೀನಿ. ಹೇಗೆ ಸಿದ್ಧವಾಗಬೇಕು, ಆ ಪಾತ್ರದ ಕಥೆ ಏನು ಎನ್ನುವುದನ್ನು ಚರ್ಚಿಸುತ್ತೇನೆ. ಯಾವುದೂ ಸುಲಭ ಅಲ್ಲ. ರಂಗಭೂಮಿಯಿಂದ ಬಂದವರು ಎಂದಾಕ್ಷಣ ಸಿನಿಮಾದಲ್ಲಿ ನಟಿಸುವುದು ಸುಲಭ ಅಲ್ಲ. ಎಲ್ಲ ಕಡೆಗಳಲ್ಲಿಯೂ ಭಯ ಇದ್ದೇ ಇರುತ್ತದೆ. ಮತ್ತು ಒಬ್ಬ ನಟನಿಗೆ ಆ ಭಯ ಇರಬೇಕು ಕೂಡ.

**◆ ರೂಪ, ವಿನ್ಯಾಸ, ನಿರ್ಮಾಣ, ಸಿದ್ಧತೆ, ಪರಿಣಾಮ, ಜನರನ್ನು ತಲುಪುವಿಕೆ ಎಲ್ಲ ದೃಷ್ಟಿಯಿಂದಲೂ ರಂಗಭೂಮಿ ಮತ್ತು ಸಿನಿಮಾ ಬೇರೆ ಬೇರೆ ರೀತಿಯ ಮಾಧ್ಯಮಗಳು. ಇವುಗಳ ಶಕ್ತಿ–ಮಿತಿಗಳು ಏನು?**

ನಾಟಕದಲ್ಲಿ ಮರುಪ್ರಯೋಗದಲ್ಲಿ ತಿದ್ದಿಕೊಳ್ಳಲು ಅವಕಾಶ ಇರುತ್ತದೆ. ಆದರೆ ಒಮ್ಮೆ ವೇದಿಕೆಯ ಮೇಲೆ ತಪ್ಪು ಮಾಡಿಬಿಟ್ಟರೆ ಅದನ್ನು ತಿದ್ದಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಆದರೆ ಸಿನಿಮಾದಲ್ಲಿ ಆ ರೀತಿ ಮರುಪ್ರಯೋಗದಲ್ಲಿ ತಿದ್ದಿಕೊಳ್ಳಲು ಅವಕಾಶ ಇರುವುದಿಲ್ಲ. ಸಿನಿಮಾ ಮುಗಿದು, ಜನರು ನೋಡಿದ ಮೇಲೆ ಅವರ ಸ್ಪಂದನ ಗಮನಿಸಿ ಸುಮ್ಮನಾಗಬೇಕು ಅಷ್ಟೆ. ಆದರೆ ಸಿನಿಮಾದಲ್ಲಿ ನಟಿಸುವಾಗ ತಪ್ಪಾದರೆ ಅದನ್ನು ಅಲ್ಲಿಯೇ ಶಾಟ್ ಕಟ್ ಮಾಡಿ ರೀಟೇಕ್ ಮಾಡಿ ತಿದ್ದಿಕೊಳ್ಳಲು ಅವಕಾಶ ಇರುತ್ತದೆ.

**◆ ಇಷ್ಟು ವರ್ಷದ ನಟನೆಯ ಸಹವಾಸ ನಿಮ್ಮೊಳಗಿನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಹೇಗೆ ಸಹಕಾರಿ ಆಗಿದೆ?**

ನನ್ನ ಹಾಗೆ ಹಳ್ಳಿಯ ರೈತಾಪಿ ಕುಟುಂಬದಿಂದ ನಗರಕ್ಕೆ ಬಂದಿರುವವರಿಗೆ ಒಂದು ಬಗೆಯ ಕೀಳರಿಮೆ ಇರುತ್ತದೆ. ನನಗೂ ಆ ಕೀಳರಿಮೆ ಇತ್ತು. ನಾಲ್ಕು ಜನ ಸೇರಿಬಿಟ್ಟರೆ ಹೇಗೆ ಮಾತನಾಡಬೇಕು ಗೊತ್ತಾಗುತ್ತಿರಲಿಲ್ಲ. ಈಗಲೂ ಪತ್ರಿಕಾಗೋಷ್ಠಿಗಳಲ್ಲಿ ಮಾತನಾಡುವುದು ನನಗೆ ಕಷ್ಟವೇ. ಆದರೆ ಒಂದು ಮಟ್ಟದ ಆತ್ಮವಿಶ್ವಾಸ ಗಳಿಸಿಕೊಂಡಿದ್ದೇನೆ. ಇಪ್ಪತ್ತೋ ಮೂವತ್ತೋ ನಟರನ್ನು ಇಟ್ಟುಕೊಂಡು, ಅವರನ್ನು ಸಿದ್ಧಗೊಳಿಸಿ ನಾಟಕ ಮಾಡುವಷ್ಟು ಸಾಮರ್ಥ್ಯ ಬಂದಿದೆ. ಇದು ಸಾಧ್ಯವಾಗಿಸಿದ್ದು ನನ್ನ ನಟನೆಯೇ.

ಹಳ್ಳಿಗಳಿಂದ ಬೆಂಗಳೂರಿನಂಥ ನಗರಗಳಿಗೆ ಬಂದು ಅಸ್ತಿತ್ವ ಕಂಡುಕೊಳ್ಳುವುದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ನನಗೆ ಒಂದು ಐಡೆಂಟಿಟಿ ಸಿಕ್ಕಿದೆಯಲ್ಲ. ನನ್ನ ಬದ್ಧತೆ, ಪ್ರಾಮಾಣಿಕತೆ, ಪರಿಶ್ರಮ ಎಲ್ಲದರ ಜೊತೆಗೇ ಇನ್ನೇನೋ ಇದೆ ಅನಿಸುತ್ತದಲ್ಲವೇ? ಈಗ ತಿರುಗಿ ನೋಡಿದರೆ ತುಂಬ ದೊಡ್ಡ ಸಾಧನೆ ಇಲ್ಲದಿದ್ದರೂ ನಾನೇನೋ ಒಂದಿಷ್ಟು ಕೆಲಸ ಮಾಡಿದ್ದೇನೆ ಎಂಬ ಸಮಾಧಾನ ಇರುತ್ತದಲ್ಲ. ಆ ಸಮಾಧಾನವನ್ನು ನನಗೆ ಕೊಟ್ಟಿದ್ದು ನಟನೆ.

> **‘ ನಂಗೆ ಎಷ್ಟೇ ಜನಪ್ರಿಯತೆ ಸಿಕ್ಕಲಿ, ಪ್ರಶಂಸನೆ, ಮೆಚ್ಚುಗೆಗಳು ವ್ಯಕ್ತವಾಗಲಿ. ನಾನು ರಂಗಭೂಮಿಯಲ್ಲಿ ಎಷ್ಟು ಸರಳವಾಗಿರುತ್ತೇನೋ ಸಿನಿಮಾದಲ್ಲಿಯೂ ಹಾಗೆಯೇ ಇರುತ್ತೇನೆ.**

**◆ ನಿಮ್ಮ ದೃಷ್ಟಿಯಲ್ಲಿ ನಟನೆ ಎಂದರೇನು?**

ನನ್ನ ಗ್ರಹಿಕೆಯ ಪ್ರಕಾರ ನಟನೆ ಎಂದರೆ ಜಸ್ಟ್ ಜೀವಿಸುವುದು. ನಾನೊಬ್ಬ ಮನುಷ್ಯನಾಗಿ ಹೇಗೆ ಸಿಟ್ಟು, ದ್ವೇಷ, ಪ್ರೀತಿ ಇವನ್ನೆಲ್ಲ ಇಟ್ಟುಕೊಂಡೇ ಬದುಕುತ್ತಿರುತ್ತೇನೆ. ಪಾತ್ರದಲ್ಲಿಯೂ ಅವೆಲ್ಲವೂ ಇರುತ್ತವೆ. ಜೀವನದಲ್ಲಿ ಈ ಎಲ್ಲ ಭಾವಗಳನ್ನು ಎಷ್ಟು ಉತ್ಕಟವಾಗಿ ಅನುಭವಿಸುತ್ತೇವೋ, ಪಾತ್ರದಲ್ಲಿಯೂ ಅಷ್ಟೇ ಆಪ್ತವಾಗಿ, ಉತ್ಕಟವಾಗಿ ಜೀವಿಸಲು ಸಾಧ್ಯವಾಗಬೇಕು. ಪಾಸಿಟಿವ್, ನೆಗೆಟಿವ್, ಸೋಲು, ಗೆಲುವು ಅವೆಲ್ಲ ನಂತರದ್ದು. ಆದರೆ ಆ ಪಾತ್ರದಲ್ಲಿ ನಟಿಸುವಾಗ ನಾನು ಆ ಪಾತ್ರವೇ ಆಗಿ ಅಲ್ಲಿರಬೇಕು ಅಷ್ಟೆ.

**◆ ಮುಖ್ಯವಾಹಿನಿಯ ಸ್ಟಾರ್ ಸಿನಿಮಾಗಳಲ್ಲಿ ಉಳಿದಪಾತ್ರಗಳಿಗೆ ಹೆಚ್ಚಿನ ಮಹತ್ವ ಸಿಗುತ್ತಿಲ್ಲ ಎಂದು ನಿಮಗನಿಸಿದೆಯೇ?**

ಇತ್ತೀಚೆಗೆ ಹೊಸದೊಂದು ಟ್ರೆಂಡ್ ಶುರುವಾಗಿದೆ. ಕಥೆ ಮತ್ತು ಪಾತ್ರಪೋಷಣೆಯನ್ನೇ ಆಧರಿಸಿ ರೂಪುಗೊಳ್ಳುತ್ತಿರುವ ಪ್ರಯೋಗಗಳು ಅವು. ಪ್ರತಿ ಪಾತ್ರಕ್ಕೂ ಅಲ್ಲಿ ಮಹತ್ವ ಇರುತ್ತದೆ. ಸ್ಟಾರ್ ಸಿನಿಮಾಗಳಲ್ಲಿಯೂ ಪೋಷಕ ಪಾತ್ರಗಳಿಗೆ ಎಷ್ಟಿರಬೇಕೋ ಅಷ್ಟು ಅವಕಾಶ ಇದ್ದೇ ಇರುತ್ತದೆ. ಆ ಅವಕಾಶದಲ್ಲಿ ನಟ ತನ್ನನ್ನು ತಾನು ಹೇಗೆ ದುಡಿಸಿಕೊಳ್ಳುತ್ತಾನೆ ಎನ್ನುವುದು ಮುಖ್ಯ. ಸ್ಟಾರ್ ಸಂಸ್ಕೃತಿಯೂ ಬೇಕು. ಜನರನ್ನು ಚಿತ್ರಮಂದಿರದತ್ತ ಸೆಳೆಯುವುದಕ್ಕೆ ಅದು ಬೇಕಾಗುತ್ತದೆ. ಎಲ್ಲ ರೀತಿಯ ಪ್ರೇಕ್ಷಕರನ್ನು ಆಕರ್ಷಿಸಲು ವಿವಿಧ ರೀತಿಯ ಸಿನಿಮಾಗಳೂ ಬರುತ್ತಿದ್ದಾಗ ಮಾತ್ರ ಚಿತ್ರರಂಗ ಬೆಳೆಯಲು ಸಾಧ್ಯ.

**◆ ಒಬ್ಬ ನಟನಾಗಿ ನಮ್ಮ ಸುತ್ತಮುತ್ತಲಿನ ಸಮಾಜವನ್ನು, ಅಲ್ಲಿನ ವಿದ್ಯಮಾನಗಳಿಗೆ ಹೇಗೆ ಸ್ಪಂದಿಸಬೇಕು? ಈ ಕುರಿತು ನಟನಿಗೆ ನೈತಿಕ ಹೊಣೆಗಾರಿಕೆ ಇದೆಯೇ?**

ರಂಗಭೂಮಿಯಲ್ಲಿ ಯಾವುದೇ ನಾಟಕ ನೋಡಿ, ಒಂದು ಬದ್ಧತೆ ಇಟ್ಟುಕೊಂಡೇ ಅದು ಸಿದ್ಧವಾಗಿರುತ್ತದೆ. ಕಾಮಿಡಿ ನಾಟಕ ಕೂಡ ಒಂದು ಬದ್ಧತೆಯಿಂದಲೇ ರೂಪುಗೊಂಡಿರುತ್ತದೆ. ಆ ಬದ್ಧತೆಯ ಮೂಲ ಯಾವುದಾದರೂ ಆಗಿರಲಿ. ರಂಜೆಯನ್ನೂ ಮೀರಿದ ಸಾಮಾಜಿಕ ಹೊಣೆಗಾರಿಕೆಯಂತೂ ಇರುತ್ತದೆ. ರಂಗಭೂಮಿಗಿಂತ ಸಿನಿಮಾಕ್ಕೆ ದೊಡ್ಡದಾದ ಪರಿಣಾಮ ಸಾಧ್ಯತೆ ಇದೆ. ಆದರೆ ಸಿನಿಮಾವನ್ನು ಈಗ ಮನೋರಂಜನಾ ಮಾಧ್ಯಮವಾಗಿ ಮಾತ್ರ ನೋಡಲಾಗುತ್ತಿದೆ. ಮನೋರಂಜನೆ ಖಂಡಿತ ಬೇಕು; ಹಣ ಕೊಟ್ಟು ಎರಡೂವರೆ ಗಂಟೆ ಚಿತ್ರಮಂದಿರದಲ್ಲಿ ಕೂತಿರುವ ಪ್ರೇಕ್ಷಕನಿಗೆ ಬರೀ ಬೋಧನೆಯೊಂದನ್ನೇ ಮಾಡುವುದಕ್ಕಾಗುವುದಿಲ್ಲ. ಅದರ ನಡುವೆ ಸಾಮಾಜಿಕ ಕಾಳಜಿಯ ಕುರಿತು ಹೇಳಬೇಕಾಗುತ್ತದೆ. ಯಾಕೆಂದರೆ ನಾವು ಈ ಸಮಾಜದಲ್ಲಿ ಬದುಕುತ್ತಿದ್ದೇವೆ. ನಮ್ಮನ್ನು ದೊಡ್ಡ ಸಂಖ್ಯೆಯಲ್ಲಿ ಪ್ರೇಕ್ಷಕರು ನೋಡುತ್ತಿರುತ್ತಾರೆ. ಒಳ್ಳೆಯ ಸಂಗತಿಗಳನ್ನು ಹೇಳಿದರೆ ಅವರು ಸ್ವೀಕರಿಸುತ್ತಾರೆ.

'ಬಂಗಾರದ ಮನುಷ್ಯ' ಸಿನಿಮಾ ನೋಡಿ, ವಾಪಸ್ ಹಳ್ಳಿಗಳಿಗೆ ವ್ಯವಸಾಯ ಮಾಡಲು ಹೋದವರ ನಿದರ್ಶನ ನೋಡಿದ್ದೇವೆ. ಕಲಾಮಾಧ್ಯಮದ ಶಕ್ತಿ ಅದು. ಮನರಂಜನೆಯನ್ನು ಇಟ್ಟುಕೊಂಡೇ ಅಂಥ ನೈತಿಕ ವಿಷಯಗಳನ್ನು ಹೇಳಬಹುದು. ಕಲಾವಿದರಿಗೂ ಅಂಥ ನೈತಿಕ ಕಾಳಜಿ ಇದ್ದಾಗ ಅದು ಸಾಧ್ಯವಾಗುತ್ತದೆ.

ಒಬ್ಬ ನಿಜವಾದ ನಟ ತನ್ನ ಸುತ್ತಲಿನ ಸಮಾಜದ ಎಲ್ಲ ಸಂಗತಿಗಳನ್ನೂ ಗ್ರಹಿಸುತ್ತಿರಬೇಕಾಗುತ್ತದೆ. ಬೀದಿಯಲ್ಲಿ ನಿಂತುಕೊಂಡು ಅವನು ಕ್ರಾಂತಿ ಮಾಡಬೇಕು ಅಂತಲ್ಲ. ಆದರೆ ತನ್ನ ಸಮಾಜದಲ್ಲಿನ ರಾಜಕೀಯವನ್ನು, ದೇಶದ ಆರ್ಥಿಕತೆಯನ್ನು, ಬಡತನವನ್ನು, ವ್ಯವಸ್ಥೆಯ ಸ್ವರೂಪವನ್ನು, ಸೈದ್ಧಾಂತಿಕ, ಧಾರ್ಮಿಕ ಭಿನ್ನಾಭಿಪ್ರಾಯಗಳು, ಜಾತಿತಾರತಮ್ಯ, ವರ್ಗಸಂಘರ್ಷ ಈ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿರಬೇಕಾಗುತ್ತದೆ. ಹಾಗಿದ್ದಾಗ ಮಾತ್ರ ಅಂಥದ್ದೊಂದು ಪಾತ್ರದಲ್ಲಿ ನಟಿಸುವ ಅವಕಾಶ ಸಿಕ್ಕಾಗ ಅದರ ಮಾಮೂಲಿ ಪಾತ್ರದ ಮೂಲಕವೇ ಹೆಚ್ಚಿನದೇನನ್ನೋ ಅಭಿವ್ಯಕ್ತಿ ಮಾಡಲು ಸಾಧ್ಯವಾಗುತ್ತದೆ.

ಚಿತ್ರಗಳು: ನವ್ಯಾ ಕಡಮೆ